ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಿದ ದಿನಾಂಕ**: 15.11.2023.**

**ಪಾಟೀ ಸವಾಲು - ವಾದಿ ಪರ ಶ್ರೀ.ಎಲ್.ಕೆ.ಆರ್. ವಕೀಲರಿಂದಃ**

4) ನಾನು 5 ನೇ ತರಗತಿಯನ್ನು ಪೂರ್ಣಗೊಳಿಸಿಲ್ಲ. ನನ್ನ ಸ್ವಂತ ಊರು ಅತ್ತಿಬೆಲೆ ಇರುತ್ತದೆ. ಅತ್ತಿಬೆಲೆ ಗ್ರಾಮದಲ್ಲಿ ನನಗೆ ಸ್ವಂತವಾಗಿ ಎಷ್ಟು ಜಮೀನು ಇದೆ ಎಂದರೆ 20 ಗುಂಟೆ ಇರುತ್ತದೆ. ವಾದಿ ಮೋಹನ ಕೂಡ ನಮ್ಮ ಊರಿನವರೇ ಎಂದರೆ ಸರಿ. ವಾದಿಯು ನನಗೆ ಸುಮಾರು 20-30 ವರ್ಷಗಳಿಂದ ಗೊತ್ತಿದ್ದಾರೆ. ನಾನು ಮತ್ತು ವಾದಿ ಒಟ್ಟಿಗೆ ಯಾವುದೇ ವ್ಯವಹಾರವನ್ನು ಮಾಡಿಲ್ಲ. ನನ್ನ ಮತ್ತು ವಾದಿಯ ಮನೆಯ ನಡುವೆ ಸುಮಾರು 2 Furlong ಅಂತರವಿರುತ್ತದೆ. ವಾದಿಗೆ ನಾನು ಹಣ ಸಹಾಯ ಮಾಡಿದ್ದುಂಟೇ? ಎಂದರೆ ನಾನೂ ಅವರಿಗೆ ಹಣ ಸಹಾಯ ಮಾಡಿಲ್ಲ, ಅವರೂ ನನಗೆ ಹಣ ಸಹಾಯ ಮಾಡಿಲ್ಲ. ನನ್ನ ಸಹಿಯನ್ನು ನೋಡಿದರೆ ಗುರುತಿಸಬಲ್ಲೆ. ನಿಡಿ-10 ದೃಢೀಕೃತ ವಿಭಾಗ ಪತ್ರದಲ್ಲಿ ಸಾಕ್ಷಿಯವರು ನನ್ನ ಸಹಿ ಇದೆ ಎಂದು ಗುರುತಿಸಿದ್ದಾರೆ. ಸಾಕ್ಷಿಯವರಿಗೆ ನಿಪಿ-1 ರಲ್ಲಿ 2 ನೇ ಪುಟದಲ್ಲಿರುವ ಸಹಿಯನ್ನು ತೋರಿಸಿದ್ದು, ಸಾಕ್ಷಿಯವರು **ನನ್ನದೇ ಸಹಿ ಎಂದು ಒಪ್ಪಿದ್ದರಿಂದ ಆ ಸಹಿಯನ್ನು ನಿಪಿ-1(ಜಿ) ಎಂದು ಗುರುತಿಸಿತು.** ನಿಪಿ-1 ರ 3 ನೇ ಪುಟದಲ್ಲಿರುವ ಸಹಿಯನ್ನು ತೋರಿಸಿದರೆ ಸಾಕ್ಷಿಯು ನನ್ನದಲ್ಲವೆಂದು ಹೇಳಿದ್ದಾರೆ. ಪ್ರತಿವಾದ ಪತ್ರದಲ್ಲಿ ಇರುವ ಅವರ ಸಹಿಗಳನ್ನು ಸಾಕ್ಷಿಯವರು ನನ್ನವೇ ಸಹಿಗಳು ಎಂದು ಗುರುತಿಸಿದ್ದಾರೆ. ಸಾಕ್ಷಿಗೆ ದಿನಾಂಕಃ 06.05.2022 ರ ಶುದ್ಧ ಕ್ರಯದ ಒಪ್ಪಿಗೆ ಪತ್ರದ ದೃಢೀಕೃತ ಪ್ರತಿಯನ್ನು ತೋರಿಸಿದ್ದು, ಅದರಲ್ಲಿ ಇರುವ ಅವರ **ಸಹಿಯನ್ನು ಗುರುತಿಸಿದ್ದರಿಂದ ಆ ದಾಖಲೆಯನ್ನು ನಿಪಿ-10 ಎಂದು ಸಹಿಯನ್ನು ನಿಪಿ-10(ಎ) ಎಂದು ಗುರುತಿಸಿತು.** ಸಾಕ್ಷಿಯವರು ಅವರ ಪರವಾಗಿ ಸಲ್ಲಿಸಿರುವ ವಕಾಲತ್ತಿನಲ್ಲಿರುವ ಅವರ ಸಹಿಯನ್ನು ನನ್ನದೇ ಎಂದು ಒಪ್ಪಿದ್ದಾರೆ. ನಿಪಿ-1(ಎ) ಸಹಿಯನ್ನು ತೋರಿಸಿದರೆ ನನ್ನದಲ್ಲವೆಂದು ಹೇಳಿದ್ದಾರೆ.

5) ವಾದಿಯು ವ್ಯವಸಾಯ ಮತ್ತು ಇಟ್ಟಿಗೆ ಗೂಡಿನ ವ್ಯವಹಾರ ಮಾಡುತ್ತಾರೆ. ವಾದಿಯು ಹಸುಗಳನ್ನು ಸಾಕಿಕೊಂಡು ಹಾಲಿನ ವ್ಯಾಪಾರಾ ಮಾಡುತ್ತಾರೆ ಎಂದರೆ ಸರಿ. ವಾದಿಯು ಹಸು ಸಾಕಾಣಿಕೆ ಮತ್ತು ವ್ಯವಸಾಯ ಬಿಟ್ಟು ಬೇರ ವ್ಯವಹಾರ ಮಾಡುವುದಿಲ್ಲ ಎಂದರೆ ಮೊದಲು ಜಮೀನುಗಳನ್ನು ಕೊಳ್ಳುವ-ಮಾರುವ ವ್ಯವಹಾರ ಮಾಡುತ್ತಿದ್ದರು. ನಮ್ಮ ಊರಿನಲ್ಲಿ ವಾದಿಯು ಎಷ್ಟು ಜನರಿಗೆ ಜಮೀನುಗಳನ್ನು ಕೊಡಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಯು ಎಷ್ಟು ಜಮೀನುಗಳನ್ನು ಖರೀದಿ ಮಾಡಿದ್ದಾರೆ ಎಂದರೆ 10-20 ಗುಂಟೆ ಖರೀದಿ ಮಾಡಿರಬಹುದು. ವಾದಿ ಖರೀದಿಸಿದ್ದಾರೆ ಎನ್ನುವ ಜಮೀನಿನ ಸರ್ವೆ ನಂಬರ್ ಮತ್ತು ವಿಸ್ತೀರ್ಣ ನನಗೆ ಗೊತ್ತಿಲ್ಲ. ಹಾಗಾದರೆ ನಾನು ಯಾವ ಆಧಾರದ ಮೇಲೆ ವಾದಿಯು ಜಮೀನುಗಳನ್ನು ಕೊಳ್ಳುವ-ಮಾರುವ ವ್ಯವಹಾರ ಮಾಡುತ್ತಿದ್ದರು ಎಂದು ಹೇಳುತ್ತಿದ್ದೇನೆ ಎಂದರೆ ನನಗೆ ವಿವರಗಳು ಗೊತ್ತಿಲ್ಲ, ಆದರೆ ಊರಿನಲ್ಲಿ ಅವರು ಆ ವ್ಯವಹಾರ ಮಾಡುತ್ತಿರುವ ಬಗ್ಗೆ ಕೇಳಿದ್ದೇನೆ. ವಾದಿಗೆ ನಾನು ಕರಾರು ಬರೆದುಕೊಟ್ಟಿದ್ದೇನೆ ಎಂಬ ವಿಚಾರ ನನಗೆ ಯಾವಾಗ ಗೊತ್ತಾಯಿತು ಎಂದರೆ ವಾದಿಯಿಂದ ನೋಟಿಸ್ ಬಂದ ನಂತರವೇ ಗೊತ್ತಾಯಿತು. ಸದರಿ ನೋಟಿಸ್ ಬಂದ ದಿನಾಂಕ, ತಿಂಗಳು ಮತ್ತು ಇಸವಿ ನನಗೆ ಗೊತ್ತಿಲ್ಲ. ಸದರಿ ನೋಟಿಸಿಗೆ ನಾನು ರಿಪ್ಲ್ಯಾ ನೀಡಿದ್ದೇನೆ. ಏನೆಂದು ರಿಪ್ಲ್ಯಾ ನೀಡಿದ್ದೇನೆ ಎಂದು ನನಗೆ ಗೊತ್ತಿದೆ. ನಾನು ಸದರಿ ರಿಪ್ಲ್ಯಾ ನೋಟಿಸ್‌ನಲ್ಲಿ ವಾದಿಗೆ ಯಾವುದೇ ಅಗ್ರಿಮೆಂಟ್ ಬರೆದುಕೊಟ್ಟಿಲ್ಲವೆಂದು ನನ್ನ ವಕೀಲರು ಮೂಲಕ ತಿಳಿಸಿರುತ್ತೇನೆ. ನನಗೆ ಸದರಿ ಕ್ರಯದ ಕರಾರಿನ ಬಗ್ಗೆ ಗೊತ್ತಾಗಿ ಸುಮಾರು 5-6 ವರ್ಷ ಆಗಿರಬಹುದೇ? ಎಂದರೆ ಆಗಿರಬಹುದು. ವಾದಿ ಸದರಿ ಕರಾರನ್ನು ಸೃಷ್ಟಿ ಮಾಡಿದ್ದಾರೆಂದು ವಾದಿಯ ವಿರುದ್ಧ ನಾನು ಪೋಲಿಸರಿಗೆ ದೂರು ಕೊಟ್ಟಿಲ್ಲ. ಗ್ರಾಮದಲ್ಲಿ ಆ ಬಗ್ಗೆ ಪಂಚಾಯತಿ ಕೂಡ ಕರೆದಿಲ್ಲ. ವಾದಿಯು ನನ್ನ ಸಹಿಯನ್ನು ನಕಲು ಮಾಡಿ ಕರಾರು ಸೃಷ್ಟಿ ಮಾಡಿದ್ದಾರೆಂದು ವಾದಿಯ ವಿರುದ್ಧ ಖಾಸಗಿ ದೂರನ್ನು ಸಲ್ಲಿಸಿರುವುದಿಲ್ಲ. ವಾದಿಯ ಕರಾರನ್ನು ರದ್ದು ಪಡಿಸಬೇಕೆಂದು ಪರಿಹಾರ ಕೋರಿ ಸಿವಿಲ್ ದಾವೆ ಕೂಡ ಸಲ್ಲಿಸಿಲ್ಲ. ವಾದಿಯಿಂದ ನನಗೆ 2 ಬಾರಿ ನೋಟಿಸ್

ಬಂದಿತ್ತು. 2 ನೇ ಬಾರಿ ನೋಟಿಸ್ ಕೊಟ್ಟ ದಿನಾಂಕ, ತಿಂಗಳು ಮತ್ತು ವರ್ಷ ನನಗೆ ಗೊತ್ತಿಲ್ಲ. 2 ನೇ ಬಾರಿ ಕೊಟ್ಟ ನೋಟಿಸ್ ಗೆ ನಾನು ರಿಪ್ಲ್ಯಾ ನೀಡಿದ್ದೇನೆ. ಆ ರಿಪ್ಲ್ಯಾ ನೋಟಿಸ್ ಕಳುಹಿಸಿದ ವಕೀಲರ ಹೆಸರು ನನಗೆ ಗೊತ್ತಿಲ್ಲ. 2 ನೇ ಬಾರಿ ರಿಪ್ಲ್ಯಾ ನೋಟಿಸ್ ಕಳುಹಿಸಿದ ವಕೀಲರ ಹೆಸರು ಕೂಡ ನನಗೆ ಗೊತ್ತಿಲ್ಲ. 2 ನೇ ಬಾರಿ ನೀಡಿದ ರಿಪ್ಲ್ಯಾ ನೋಟಿಸ್‌ನಲ್ಲಿ ನಾನು ಮೊದಲ ರಿಪ್ಲ್ಯಾ ನೋಟಿಸ್ ನಲ್ಲಿ ತಿಳಿಸಿದ್ದ ಸಂಗತಿಗಳನ್ನು ನಮೂದಿಸಿದ್ದೆ. ಈಗ ನಾನು ಮತ್ತು ವಾದಿ ಪರಸ್ಪರ ಮಾತನಾಡಿಸುವುದಿಲ್ಲ. ಕರಾರು ಆದ ನಂತರ ಕೂಡ ಸ್ವಲ್ಪ ಕಾಲ ನಾವು ಪರಸ್ಪರ ಮಾತನಾಡುತ್ತಿದ್ದೆವು. ಅದಾದ ನಂತರ ನನಗೂ ಅವರಿಗೂ ಮಾತುಕತೆ ಇಲ್ಲ.

6) 2011 ರಲ್ಲಿ ನಮ್ಮ ಗ್ರಾಮದಲ್ಲಿ 1 ಗುಂಟೆ ಜಮೀನಿಗೆ ಎಷ್ಟು ಬೆಲೆ ಇತ್ತು ಎಂದು ನನಗೆ ಗೊತ್ತಿಲ್ಲ. ಈಗಲೂ ನಮ್ಮ ಗ್ರಾಮದಲ್ಲಿ 1 ಗುಂಟೆ ಜಮೀನಿಗೆ ಎಷ್ಟು ಬೆಲೆ ಇರುತ್ತದೆ ಎಂದು ನನಗೆ ಗೊತ್ತಿಲ್ಲ. 2011 ರಲ್ಲಿ ನಮ್ಮ ಗ್ರಾಮದಲ್ಲಿ 1 ಗುಂಟೆ ಜಮೀನಿಗೆ ರೂ.1 ಲಕ್ಷದಿಂದ ರೂ.1 ಲಕ್ಷ 20 ಸಾವಿರ ಬೆಲೆ ಇತ್ತು ಎಂದರೆ ನನಗೆ ಗೊತ್ತಿಲ್ಲ. ನಮ್ಮ ಊರಿನ ಚಂದ್ರಶೇಖರ್ ಬಿನ್ ರುದ್ರಪ್ಪ ನನಗೆ ಪರಿಚಯವಿದ್ದಾರೆ. ಸದರಿ ಚಂದ್ರಶೇಖರ್ ಬಿನ್ ರುದ್ರಪ್ಪ ವಯಸ್ಸಿನಲ್ಲಿ ನನಗಿಂತ ಹಿರಿಯರು ಇರುತ್ತಾರೆ. ಸದರಿಯವರಿಗೆ ನಮ್ಮ ಗ್ರಾುದಲಿ ಅಂಗಡಿ ಇದೆ ಎಂದರೆ ಸರಿ. ಗ್ರಾಮಸ್ಥರು ಅವರನ್ನು ಚಂದ್ರಣ್ಣ ಎಂದು ಕರೆಯುತ್ತಾರೆ ಎಂದರೆ ಸರಿ. ನಾನೂ ಕೂಡ ಅವರ ಅಂಗಡಿಗೆ ಹೋಗುತ್ತೇನೆ ಎಂದರೆ ಸರಿಯಲ್ಲ. ನನಗೂ ಸದರಿ ಚಂದ್ರಶೇಖರ್ ರವರಿಗೂ ಯಾವುದೇ ವಿಧವಾದ ವೈಷ್ಯಮ್ಮವಿಲ್ಲ ಎಂದರೆ ಸರಿ. ನಮ್ಮ ಗ್ರಾಮದ ಕಾಮಣ್ಣನ ಮಗ ರಾಮಕೃಷ್ಣ ನನಗೆ ಪರಿಚಯವಿದ್ದಾರೆ ಎಂದರೆ ಅಷ್ಟಾಗಿ ಪರಿಚಯವಿಲ್ಲ. ಸದರಿಯವರು ನಮ್ಮ ಗ್ರಾಮದವರೇ ಎಂದರೆ ಸರಿ. ನಾನು ಮತ್ತು ಕಾಮಣ್ಣನ ಮಗ ರಾಮಕೃಷ್ಣ ಪರಸ್ಪರ ಮಾತನಾಡುವುದಿಲ್ಲವೇ? ಎಂದರೆ ಇಲ್ಲ. ಅವರಿಗೂ ನನಗೂ ಯಾವುದೇ ವಿಧವಾದ ದ್ವೇಷ-ವೈಷ್ಯಮ್ಮ ಇಲ್ಲ ಎಂದರೆ ಸರಿ. ನಾನು ದಾವಾ ಸ್ವತ್ತನ್ನು ಮಾರಾಟ ಮಾಡಬಯಸಿದ್ದೇನೆ ಎಂದು ಸದರಿ ಚಂದ್ರಶೇಖರ್

ಮತ್ತು ಕಾಮಣ್ಣನ ಮಗ ರಾಮಕೃಷ್ಣ ಇವರಿಗೆ ಹೇಳಿದ್ದೆ ಎಂದರೆ ಸರಿಯಲ್ಲ. ಅವರಿಬ್ಬರೇ ನನ್ನ ಜಮೀನನ್ನು ವಾದಿಗೆ ಮಾರಾಟ ಮಾಡಿಸುವುದಾಗಿ ಹೇಳಿದ್ದರು ಎಂದರೆ ಸರಿಯಲ್ಲ. ಅವರಿಬ್ಬರ ಮುಖಾಂತರೇ ಮಾತುಕತೆ ಮಾಡಿ ಕ್ರಯದ ಕರಾರು ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಕರಾರು ಮಾಡಿಕೊಳ್ಳುವಾಗ ನಾನು ವಾದಿಗೆ ನನ್ನ ಪಹಣಿ ಮತ್ತು ಮ್ಯೂಟೇಶನ ದಾಖಲೆಗಳನ್ನು ಕೂಡ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು, ಚಂದ್ರಶೇಖರ್ ಮತ್ತು ರಾಮಕೃಷ್ಣ ಸೇರಿಯೇ ಕ್ರಯದ ಮೌಲ್ಯವನ್ನು ರೂ.12,20,000/- ಎಂದು ನಿರ್ಧರಿಸಿದ್ದೆವು ಎಂದರೆ ನಾನು ಯಾವುದೇ ಹಣ ಪಡೆದಿಲ್ಲ. ಕರಾರು ಆದ ಕಾಲಕ್ಕೆ ಚಂದ್ರಶೇಖರ ರವರ ಅಂಗಡಿ ಬಳಿ ಮಾತುಕತೆ ನಡೆದಿತ್ತು, ಅದರಲ್ಲಿ ನಾವೆಲ್ಲಾ ಭಾಗವಹಿಸಿದ್ದೆವು ಎಂದರೆ ಸರಿಯಲ್ಲ. ನಾನು ಸಾಕ್ಷಿಗಳ ಸಮಕ್ಷಮ ಮುಂಗಡ ಹಣವನ್ನು ಪಡೆದ ನಂತರವೇ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಈಗ ವ್ಯವಸಾಯ ಮಾಡುತ್ತಿದ್ದೇನೆ, ಮೊದಲು ಬಡಗಿ ಕೆಲಸ ಮಾಡುತ್ತಿದ್ದೆ, ಈಗ ಅದನ್ನು ಮಾಡಲು ಆಗುತ್ತಿಲ್ಲ. ದಿನಾಂಕಃ 13.04.2011 ರಂದು ನಾನು ವಾದಿಯಿಂದ ರೂ.7 ಲಕ್ಷ 13 ಸಾವಿರ ಮುಂಗಡ ಪಡೆದು ದಾವಾ ಸ್ವತ್ತನ್ನು ವಾದಿಗೆ ಮಾರಾಟ ಮಾಡಲು ಒಪ್ಪಿ ಕ್ರಯದ ಕರಾರು ಪತ್ರ ಬರೆದುಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಚಂದ್ರಶೇಖರ್ ಮತ್ತು ರಾಮಕೃಷ್ಣರವರ ಸಮಕ್ಷಮದಲ್ಲಿ ಮುಂಗಡ ಹಣವನ್ನು ಪಡೆದು ಕ್ರಯದ ಕರಾರಿಗೆ ಸಹಿ ಮಾಡಿರುವ ಕಾರಣದಿಂದಲೇ ಅವರಿಬ್ಬರೂ ಕೋರ್ಟಿಗೆ ಬಂದು ಸಾಕ್ಷಿ ಹೇಳಿದ್ದಾರೆ ಎಂದರೆ ಸರಿಯಲ್ಲ. ಅವರಿಬ್ಬರೂ ಕೋರ್ಟಿಗೆ ಬಂದು ಸಾಕ್ಷಿ ಹೇಳಿದ್ದಾರೆ ಎಂದರೆ ಸರಿ. ನಾನು 2011 ರಲ್ಲಿ ವಾದಿಯಿಂದ ಮುಂಗಡವಾಗಿ ಪಡೆದ ರೂ.7 ಲಕ್ಷ 13 ಸಾವಿರ ಮೊತ್ತವನ್ನು ಬಡ್ಡಿಗೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಸದರಿ ಹಣವನ್ನು ಬಡ್ಡಿಗೆ ಬಿಟ್ಟು ಅದರಿಂದ ಸುಮಾರು ರೂ.25 ಲಕ್ಷದವರೆಗೆ ಹಣ ಗಳಿಸಿದ್ದೇನೆ ಎಂದರೆ ಸರಿಯಲ್ಲ.

7) ನನ್ನ ಹೆಂಡತಿ ಹೆಸರು ಪ್ರೇಮಾ ಎಂದರೆ ಸರಿ. ನನ್ನ ಹೆಂಡತಿ ಅವತಿ ಗ್ರಾಮದಲ್ಲಿ ಗಾರ್ಮೆಂಟ್ಸ್ ಕೆಲಸಕ್ಕೆ ಹೋಗುತ್ತಾರೆ. 2019 ರಲ್ಲಿ ನಾನು ನನ್ನ

ಹೆಂಡತಿಯ ಹೆಸರಿನಲ್ಲಿ ಸೈಟ್ ಖರೀದಿ ಮಾಡಿದ್ದೇನೆ ಎಂದರೆ ಸರಿ. ವಾದಿಯಿಂದ ಪಡೆದ ಮುಂಗಡ ಹಣದಿಂದಲೇ ಸದರಿ ಸೈಟನ್ನು ಖರೀದಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಆ ಸೈಟ್ ನಲ್ಲಿ ನಾವು ಮನೆ ಕೂಡ ಕಟ್ಟಿದ್ದೇವೆ ಎಂದರೆ ಸರಿ.

**(**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಿತು**).**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**